ಈ) ಸದರಿ ಕಟ್ಟಡದ ಮೊದಲ ಅಂತಸ್ತು ದುರಸ್ತಿ ಕಾರ್ಯವನ್ನು ಕೂಡಲೇ ಮಾಡಲು ಸರಕಾರವು ಕ್ರಮಕೈಗೊಳ್ಳುವುದೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಟೆಂಡರ್ಸ್ ಕರೆಯಲಾಗಿದೆ. ಟೆಂಡರ್ಸ್ ಅನುಮೋದನೆ ನಂತರ ಕಾಮಗಾರಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಇ) -ಅದೇ-

ಈ) ಮೊದಲನೆ ಮಹಡಿ ಕಟ್ಟಲು ನ್ಯಾಯಾಲಯದ ತಡೆಯಾಜ್ಞೆ ಇರುತ್ತದೆ. ತಡೆಯಾಜ್ಞೆ ತೆರವಾದ ನಂತರ ಕ್ರಮತೆಗೆದುಕೊಳ್ಳಲಾಗುವುದು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಅಧ್ಯಕ್ಷರೇ, ಭಾರತದ ನಿಯಂತ್ರಕರು ಮಹಾಲೇಖಪಾಲಕರು, ನೀಡಿರುವ ಕರ್ನಾಟಕ ಸರ್ಕಾರದ 93ನೇ ಸಾಲಿನ ಮಾರ್ಚ್ 31ರ ಅಂತ್ಯದವರೆಗೆ ವಾಣಿಜ್ಯಕ್ಕೆ ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಮಂಡಿಸಲಾಯಿತು.

ನಿಯಮ 334ರ ಮೇರೆಗೆ

1. ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿ ಚಿಕ್ಕಸಂದ್ರ ಕಾವಲ್ ಸರ್ವೆ ನಂ. 1ರ 256 ಎಕರೆ ಜಮೀನನ್ನು ಕಂದಾಯ ಇಲಾಖೆಗೆ ವರ್ಗ ಮಾಡುವುದು.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಸಭಾಪತಿಯವರೆ, ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಬುಕ್ಕಾಪಟ್ಟಣ ಹೋಬಳಿ ಚಿಕ್ಕಸಂದ್ರ ಕಾವಲ್ ಸರ್ವೆ ನಂ.(1)ರ 256 ಎಕರೆ ಜಮೀನನ್ನು ಅರಣ್ಯ ಇಲಾಖೆಯಿಂದ ಬಿಡುಗಡೆಯಾಗಿದ್ದು ಕಂದಾಯ ಇಲಾಖೆಗೆ ಇದುವರೆಗೂ ವರ್ಗಾವಣೆ ಆಗಿರುವುದಿಲ್ಲ. ಈ ಕಾರಣ ಸ್ವಾಧೀನಾನುಭವದಲ್ಲಿರುವ ಅಕ್ರಮಸಾಗುವಳಿದಾರರಿಗೆ ಜಮೀನು ಮಂಜೂರು ಮಾಡಲು ತೊಂದರೆಯುಂಟಾಗಿರುತ್ತದೆ. ಆದಕಾರಣ ಅರಣ್ಯ ಇಲಾಖೆಯವರು ಕೂಡಲೇ ಕಂದಾಯ ಇಲಾಖೆಗೆ ಈ ಜಮೀನನ್ನು ವರ್ಗಾಯಿಸಲು ಅರಣ್ಯ ಖಾತೆ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ಖಾತೆ ರಾಜ್ಯ ಸಚಿವರು) : ಮಾನ್ಯ ಉಪಸಭಾಪತಿಯವರೇ,

ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 32 ಎಲ್‌ಎಡಿ 62 ದಿನಾಂಕ : 1-8-1964ರಂತೆ ಶಿರಾ ತಾಲ್ಲೂಕು ಬುಕ್ಕಾ ಪಟ್ಟಣ ಹೋಬಳಿ ಚಿಕ್ಕಸಂದ್ರ ಕಾವಲ್ ಸರ್ವೆನಂ. 1ರಲ್ಲಿ 253-34 ಎಕರೆ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ಹಸ್ತಾಂತರಿಸಲಾಗಿತ್ತು. ಆದರೆ, ಪುನಃ ಸರ್ಕಾರಿ ಆದೇಶ ಸಂಖ್ಯೆ :ಆರ್ ಡಿ 247 ಎಲ್‌ಜಟಿ 73 ದಿನಾಂಕ : 18-1-7 4ರಲ್ಲಿ ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾಯಿಸಲ್ಪಟ್ಟಿದ್ದ, ಸದರಿ 253-34 ಎಕರೆ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯಲ್ಲಿಯೇ ಉಳಿಸಿಕೊಳ್ಳಲಾಗಿರುವ ಪ್ರಯುಕ್ತ, ಪ್ರಶ್ನಿತ 253-34 ಎಕರೆ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವರ್ಗಾವಣೆ